ಸೃಜನಿ

SRUJANI: Indian Journal of Innovative Research and Development (SIJIRD)
Volume-4 Issue 6, January-February 2026, Pp. 79-81
Bi-Monthly, Peer-Reviewed, Open Access, Indexed Journal

I S S N: 2583-3510
SIRDF
JOURNALS
editor@srujani.in
www.srujani.in

# ಕೃಷ್ಣರಾಜಪೇಟೆ ಪ್ರದೇಶದ ಜೈನ ಬಸದಿಗಳು

**ಸುವರ್ಣ ವಿ[1] ಮತ್ತು ಡಾ. ರಾಚಯ್ಯ[2]**
[1]ಸಂಶೋಧನಾ ವಿದ್ಯಾರ್ಥಿ, [2]ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು
ಇತಿಹಾಸ ವಿಭಾಗ, ಮಹಾರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

**Abstract:**
*ಭಾರತದ ಅತಿ ಪ್ರಾಚೀನ ಧರ್ಮಗಳಲ್ಲಿ ಜೈನ ಧರ್ಮವೂ ಒಂದಾಗಿದೆ. ಜೈನ ಧರ್ಮದ ಸ್ಥಾಪಕರಾದ 24ನೇ ತೀರ್ಥಂಕರರು ಜೈನ ಧರ್ಮವನ್ನು ಪುನರುಜ್ಜೀವನಗೊಳಿಸಿದರು. ಜೈನ ಧರ್ಮದಲ್ಲಿ ತೀರ್ಥಂಕರರ ಪರಿಕಲ್ಪನೆ ಪ್ರಾಚೀನ ಕಾಲದಿಂದಲೂ ಬೆಳೆದು ಬಂದಿವೆ. ಜೊತೆಗೆ ತೀರ್ಥಂಕರರ ಆರಾಧನೆಗೆ ಆಲಯಗಳ ನಿರ್ಮಾಣ ಪರಂಪರೆ ಪ್ರಾಚೀನ ಕಾಲದಿಂದಲೂ ರೂಢಿಯಲ್ಲಿದೆ. ಕಾಲಾಂತರದಲ್ಲಿ ಈ ಧರ್ಮದಲ್ಲಿ ದಿಗಂಬರ, ಶ್ವೇತಾಂಬರ, ಚೈತ್ಯವಾಸಿ, ಯಾಪನೀಯ, ತಾರಣ, ತೇರಪೀಸ ಪಂಥಗಳು ಪ್ರಚಲಿತಕ್ಕೆ ಬಂದು ತಮ್ಮ ತತ್ವ, ಸಿದ್ಧಾಂತ, ಆಚಾರ, ವಿಚಾರ, ನಂಬುಗೆ, ಸಂಪ್ರದಾಯ, ಸಾಹಿತ್ಯ, ಆರಾಧನೆ ಮೊದಲಾದ ವಿಚಾರಗಳನ್ನು ಬೆಳೆಸಿಕೊಂಡು ಬಂದಿದೆ. ಪ್ರಸ್ತುತ ಲೇಖನದಲ್ಲಿ ಕೃಷ್ಣರಾಜಪೇಟೆ ಪ್ರದೇಶದ ಜೈನ ಬಸದಿಗಳನ್ನು ಕುರಿತು ಅಧ್ಯಯನ ಮಾಡಲಾಗಿದೆ.*

**Keywords:** *ಕರ್ನಾಟಕ ಇತಿಹಾಸ, ಜೈನ ಪರಂಪರೆ, ಜೈನಬಸದಿಗಳು, ಕೃಷ್ಣರಾಜಪೇಟೆ.*

## ಪೀಠಿಕೆ

ಜೈನ ಧರ್ಮದ ಬಸದಿಗಳ ನಿರ್ಮಾಣ ಪರಂಪರೆ ಒಂದನೆಯ ತೀರ್ಥಂಕರ ಆದಿನಾಥನ ಪುತ್ರ ಭರತನ ಕಾಲದಲ್ಲಿಯೇ ಗೋಚರಿಸುತ್ತದೆ. ಆತನು ಕೈಲಾಸ ಪರ್ವತದಲ್ಲಿ ಚೈತ್ಯವನ್ನು ನಿರ್ಮಿಸಿದ ವಿಚಾರ ಜಿನ ಸೇನಾಚಾರ್ಯನ ಪೂರ್ವ ಪುರಾಣದಲ್ಲಿ ಉಲ್ಲೇಖಿತವಾಗಿದೆ. ಕ್ರಿ.ಪೂ. 4–5ನೇ ಶತಮಾನದಲ್ಲಿ ರಚಿತವಾಗಿರುವ ಪ್ರಾಕೃತ ಕೃತಿಗಳಲ್ಲಿ ಚೈತ್ಯಾಲಯಗಳ ನಿರ್ಮಾಣದ ಕುರಿತು ಉಲ್ಲೇಖಗಳಿವೆ.

ಕನ್ನಡ ನಾಡಿನಲ್ಲಿ ಬೆಳೆದು ಬಂದ ಜೈನ ಧರ್ಮವು ಮಂಡ್ಯ ಜಿಲ್ಲೆಯಲ್ಲಿ ಕ್ರಿಸ್ತಶಕಾರಂಭದಿಂದಲೂ ಜನಪ್ರಿಯ ಧರ್ಮವಾಗಿ ಬೆಳೆದು ಬಂದಿದೆ. ಈ ಪ್ರದೇಶದಲ್ಲಿ ಅರಸು, ಗಂಗ ಮತ್ತು ಹೊಯ್ಸಳ ಮನೆತನಗಳ ಆಳ್ವಿಕೆಯ ಕಾಲಾವಧಿಯಲ್ಲಿ ಈ ಧರ್ಮದ ಬಸದಿಗಳು ಅಧಿಕವಾಗಿ ನಿರ್ಮಾಣವಾದವು. ಈ ನಿರ್ಮಾಣ ಪರಂಪರೆ ಕೃಷ್ಣರಾಜಪೇಟೆ ಪ್ರದೇಶದಲ್ಲಿಯೂ ಅತ್ಯಧಿಕವಾಗಿ ಬೆಳೆದು ಬಂದಿರುವುದು ಪುರಾತತ್ವ ಆಕರಗಳಿಂದ ಸ್ಪಷ್ಟವಾಗುತ್ತದೆ. ಈ ಪ್ರದೇಶದಲ್ಲಿ ಈಗ ಉಳಿದು ಬಂದಿರುವ ಬಸದಿಗಳ ಕಾಲಮಾನ, ನಿರ್ಮಾತೃ, ಜೀರ್ಣೋದ್ಧಾರ, ದಾನ–ದತ್ತಿಗಳು ಮತ್ತು ಅವುಗಳ ವಾಸ್ತು ಲಕ್ಷಣಗಳು ಕೆಳಗಿನಂತಿವೆ.

### ಹೊಸಹೊಳಲು ಬಸದಿ

ಈ ಜಿನಾಲಯವು 1118 ರ ವಿಷ್ಣುವರ್ಧನನ ಕಾಲವೆಂದು ತಿಳಿದು ಬರುತ್ತದೆ. ಈ ಬಸದಿಯಲ್ಲಿ 11

***Please cite this article as:*** ಸುವರ್ಣ ವಿ ಮತ್ತು ರಾಚಯ್ಯ. (2026). ಕೃಷ್ಣರಾಜಪೇಟೆ ಪ್ರದೇಶದ ಜೈನ ಬಸದಿಗಳು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರಿಸರ್ಚ್ ಅಂಡ್ ಡೆವೆಲಪ್‌ಮೆಂಟ್,* 4(6), 79–81

ಅಡಿ ಎತ್ತರದ ಪಾರ್ಶ್ವನಾಥನ ವಿಗ್ರಹವಿದೆ. ನವರಂಗದಲ್ಲಿ ಧರಣೇಂದ್ರ ಮತ್ತು ಪದ್ಮಾವತಿಯರ ಚಿತ್ರಗಳಿವೆ. ಚೌಕಾಕಾರದ 4 ಮೂಲೆಗಳಲ್ಲಿ ಅರ್ಧಗಂಬಗಳಿವೆ. ಭಿತ್ತಿಗಳು, ವಿತಾನ ಮತ್ತು ಧಾರಬಂಧವು ಸರಳವಾಗಿವೆ. ಮತ್ತೊಂದು ತ್ರಿಕೂಟ ಬಸದಿಯನ್ನು ಕತ್ತರಿಘಟ್ಟದಲ್ಲಿ ಚಾವುಂಡಾಂಬೆ ಕಟ್ಟಿಸಿದಳು, ಇದರ ಬಗ್ಗೆ 3ನೇ ಶಾಸನ ತಿಳಿಸುತ್ತದೆ. ಆಕೆ ಈ ಬಸದಿಗಾಗಿ ಕೆರೆಯ ಕೆಳಗೆ ಗದ್ದೆ, ಮನೆ, ತೋಟ ಮುಂತಾದವುಗಳು ದತ್ತಿಯಾಗಿ ಬಿಟ್ಟಳು. ಈಕೆಯನ್ನು ಕುರಿತು ಶಾಸನ ಹೀಗೆ ಹೇಳಿದೆ.

***ಉತ್ತಮ ವಸ್ತು ಸುವನ್ಯಮ***
***ನುತ್ತಮ ಪಾತ್ರಕ್ಕೆ ಕೊಟ್ಟು ದೇಮಾಂಬಿಕೆ***
***ಉತ್ತಮೆಯೆನೆ ಸರಳ ಜನಂ***
***ಕತ್ತರಿಘಟ್ಟದೊಳ್ ಬಸದಿಯಂ ಮೂಡಿಸಿದಳ್***

ಈ ಜಿನಾಲಯವು 1995ರಲ್ಲಿ ಸಂಪೂರ್ಣ ಜೀರ್ಣೋದ್ಧಾರವಾಗಿದೆ. ಹೀಗಾಗಿ ಇದರ ಹೊರ ಭಾಗದ ವಾಸ್ತು ಲಕ್ಷಣಗಳೆಲ್ಲವೂ ಇತ್ತೀಚಿನದವುಗಳಾಗಿವೆ. ಈ ಜಿನಾಲಯದ ಬಲ ಬದಿಯಲ್ಲಿ ಬಾಹುಬಲಿಯ ಶಿಲ್ಪವಿದೆ.

**ವಾಸ್ತು ಶಿಲ್ಪ ಲಕ್ಷಣಗಳು**

ಚೌಕಾಕಾರವಾದ ನಾಲ್ಕು ಮೂಲೆಗಳಲ್ಲಿ ಆರ್ಧಗಂಭಗಳಿವೆ. ಭಿತ್ತಿಗಳು, ವಿತಾನ ಮತ್ತು ದ್ವಾರಬಂಧವು ಸರಳವಾಗಿದೆ. ಲಲಾಟ ಪಟ್ಟಿಯಲ್ಲಿ ಪದ್ಮಾಸನದಲ್ಲಿರುವ ಜಿನನ ಉಬ್ಬು ಶಿಲ್ಪವಿದೆ. ಗರ್ಭ ಗೃಹದಲ್ಲಿ ಚೌವ್ವೀಸ ತೀರ್ಥಂಕರ ಪಾರ್ಶ್ವನಾಥ, ಅನಂತನಾಥ ಮತ್ತು ಪದ್ಮಾವತಿಯ ಶಿಲ್ಪಗಳಿವೆ. ನವರಂಗದಲ್ಲಿ ಚೌಕಾಕಾರವಾದ ನಾಲ್ಕು ಬ್ರಹ್ಮಕಾಂತ ಶೈಲಿಯ ಸ್ತಂಭಗಳಿವೆ. ಇವು ಕ್ರಮವಾಗಿ ಪೀಠ, ಪಾದ, ದಂತ, ಫಲಕ ಮತ್ತು ಬೋದಿಗೆಗಳಿವೆ. ಭಿತ್ತಿಯಲ್ಲಿ 12 ಅರ್ಧಗಂಭಗಳಿವೆ. ವಿತಾನ ಮತ್ತು ದ್ವಾರ ಬಂಧವು ಸರಳವಾಗಿವೆ.

**ಬಸ್ತಿ ಹಳ್ಳಿಯ ಬಸದಿ**

ಕ್ರಿ.ಶ. ಸುಮಾರು 12ನೇ ಶತಮಾನದಲ್ಲಿ ನಿರ್ಮಿಸಿದ ಬಾಹುಬಲಿ ವಿಗ್ರಹ ಇದನ್ನು ಹೊಯ್ಸಳ ದೊರೆ ವಿಷ್ಣುವರ್ಧನ ಆಡಳಿತವನ್ನು ತಿಳಿಸಿ ಆತನ ಮಂತ್ರಿಯಾಗಿದ್ದ ಪುಣಿಶಮಯ್ಯನು ಬಸದಿ ನಿರ್ಮಿಸಿ 18 ಅಡಿ ಎತ್ತರದ ಗೊಮ್ಮಟವನ್ನು ನಿರ್ಮಿಸಿದ್ದುದ್ದರ ಬಗ್ಗೆ ತಿಳಿಸಿ ಮಾಣಿಕ್ಯ ದೊಡಲೂರುವಿಗೆ ಮಾವಿನ ಕೆರೆಯನ್ನು ಬಸದಿಗಾಗಿ ದತ್ತಿ ಬಿಟ್ಟ ವಿಚಾರವನ್ನು ಬಸ್ತಿ ಶಾಸನವು ತಿಳಿಸುತ್ತದೆ.

ಈ ಗ್ರಾಮದ ಹಾಳೂರದಲ್ಲಿ (ಕನ್ನಂಬಾಡಿ ಹಿನ್ನೀರಿನ ಪ್ರದೇಶ) ಭಗ್ನಾವಸ್ಥೆಯಲ್ಲಿರುವ ಐದು ಶಿಲಾ ಮಂಟಪಗಳಿವೆ. ಇವುಗಳಲ್ಲಿ ಮೂರು ಪೂರ್ವಾಭಿಮುಖವಾಗಿದ್ದು ಇನ್ನೆರಡು ಉತ್ತರಾಭಿಮುಖವಾಗಿವೆ ಇವೆಲ್ಲವೂ ದ್ರಾವಿಡ ಶೈಲಿಯಲ್ಲಿವೆ. ಇವುಗಳ ನಿರ್ಮಾಣದಲ್ಲಿ ಕಪ್ಪು ಬಳಪದ ಶಿಲೆಯನ್ನು ಬಳಸಲಾಗಿದೆ. ಹೊಯ್ಸಳ ಮನೆತನದ ವೀರನಾರಸಿಂಹನ ಆಳ್ವಿಕೆಯಲ್ಲಿ ಅಂದರೆ ಕ್ರಿ.ಶ. 1162 ರಲ್ಲಿ ಕೃಷ್ಣರಾಜಪೇಟೆ ಪ್ರದೇಶದಲ್ಲಿದ್ದ ಜಿನಾಲಯಕ್ಕೆ ದಾನ ದತ್ತಿಗಳನ್ನು ನೀಡಿದ ಸಂಗತಿಯೂ ಸ್ಥಳೀಯ ಶಾಸನದಲ್ಲಿ ಉಲ್ಲೇಖಿತವಾಗಿವೆ. ಹೀಗಾಗಿ ಕ್ರಿ.ಶ. ಸುಮಾರು 12ನೇ ಶತಮಾನದ ಎರಡು ಜಿನಾಲಯಗಳಿದ್ದವೆಂಬುದು ದೃಢಪಡುತ್ತದೆ. ಕಾಲಾಂತರದಲ್ಲಿ ಆ ಜಿನಾಲಯವು ಹಾಳಾಗಿದ್ದು, ಕನ್ನಂಬಾಡಿ ಹಿನ್ನೀರಿನ ಸೆಳೆತಕ್ಕೆ ಅವು ಮೂಲ ವಾಸ್ತು ಸ್ವರೂಪವನ್ನು ಕಳೆದುಕೊಂಡಿವೆ.

**ವಾಸ್ತು ಲಕ್ಷಣಗಳು**

ಈ ಜಿನಾಲಯವು ಚೌಕಾಕಾರವಾದ ನಾಲ್ಕು ಮೂಲೆಗಳಲ್ಲಿ ಅರ್ಧಗಂಭಗಳಿವೆ. ಭಿತ್ತಿ ಸರಳವಾಗಿದೆ. ವಿತಾನದಲ್ಲಿ ಪದ್ಮ ಮಂಡಲದ ಅಲಂಕಾರವಿದೆ. ದ್ವಾರಬಂಧವು ತ್ರಿಶಾಖೆಗಳಿಂದ ಕೂಡಿದ್ದು ಇದರಲ್ಲಿ ಸ್ತಂಭಶಾಖೆ ಪ್ರಧಾನವಾಗಿದೆ. ಲಲಾಟ ಪಟ್ಟಿಯಲ್ಲಿ ಪಾರ್ಶ್ವನಾಥನ ಉಬ್ಬು ಶಿಲ್ಪವಿದೆ.

**ಮುರುಕನಹಳ್ಳಿ ಜಿನಾಲಯ**

ಈ ಬಸದಿಯು ನಿರ್ಮಾಣದ ಕುರಿತು ಶಾಸನಾಧಾರಗಳಿಲ್ಲ. ಆದರೆ ಇದು ವಾಸ್ತು ಲಕ್ಷಣಗಳ ಅಧ್ಯಯನದಿಂದ ಇದು ಹೊಯ್ಸಳರ

ಕಾಲದಲ್ಲಿ ನಿರ್ಮಾಣವಾಯಿತೆಂದು ಸ್ಪಷ್ಟವಾಗುತ್ತದೆ. ಗರ್ಭ ಗೃಹವು 4 ಮೂಲೆಗಳಲ್ಲಿ ಅರ್ಧಗಂಬಗಳಿವೆ. ಭಿತ್ತಿ ಸರಳವಾಗಿದೆ, ವಿತಾನದಲ್ಲಿ ಪದ್ಮ ಮಂಡಲದ ಅಲಂಕಾರವಿದೆ. ದ್ವಾರ ಬಂಧವು ತ್ರಿಶಾಖೆಗಳಿಂದ ಕೂಡಿದ್ದು ಸ್ತಂಭ ಶಾಖೆ ಪ್ರಧಾನವಾಗಿದೆ. ಗರ್ಭ ಗೃಹದ ಮೇಲೆ ದ್ರಾವಿಡ ಶೈಲಿಯ ಶಿಖರವಿದೆ. ನವರಂಗದ ಮಧ್ಯದಲ್ಲಿ ನಾಲ್ಕು ಬ್ರಹ್ಮಕಾಂತ ಶೈಲಿಯ ಸ್ತಂಭಗಳಿವೆ. ಗರ್ಭ ಗೃಹದಲ್ಲಿ ಪಾರ್ಶ್ವನಾಥನ ಉಬ್ಬು ಶಿಲ್ಪವಿದೆ. ಮುಖ ಮಂಟಪ ಆಯತಾಕಾರವಾಗಿದೆ. ವಿತಾನವು ಸಮತಲವಾಗಿದೆ. ಹೊಯ್ಸಳರ ಕಾಲದಲ್ಲಿ ನಿರ್ಮಾಣವಾದ ಮುರುಕನಹಳ್ಳಿಯ ಜಿನಾಲಯವು ಬಹಳ ವೈಶಿಷ್ಟ್ಯವಾದ ಜೈನರ ಮೂರ್ತಿಯನ್ನು ಒಳಗೊಂಡಿದೆ.

ಹೀಗೆ ಈ ಧರ್ಮದ ಮುನಿ ಪರಂಪರೆಯ ಪ್ರಭಾವ ಮತ್ತು ಕವಿಗಳ ಪಾಂಡಿತ್ಯದಿಂದ ಪ್ರೇರಣೆಗೊಳಗಾದ ಸಮಕಾಲೀನ ಅರಸರು, ಶ್ರಾವಕ ಶ್ರಾವಕಿಯರು ಮತ್ತು ಜೈನ ಧರ್ಮದೆಡೆಗೆ ಒಲವುಳ್ಳ ಅನುಯಾಯಿಗಳು ಅಧಿಕ ಪ್ರಮಾಣದಲ್ಲಿ ಬಸದಿಗಳನ್ನು ನಿರ್ಮಿಸಿ ಈ ನಾಡಿನ ವಾಸ್ತು ಕಲಾ ಪರಂಪರೆಯನ್ನು ಶ್ರೀಮಂತವಾಗಿಸಿದ್ದಾರೆ. ಹೀಗೆ ಕನ್ನಡ ನಾಡಿನಲ್ಲಿ ಬೆಳೆದು ಬಂದ ಜೈನ ಧರ್ಮವು ಮಂಡ್ಯ ಜಿಲ್ಲೆಯಲ್ಲಿ ಕ್ರಿಸ್ತಶಕಾರಂಭದಿಂದಲೂ ಜನಪ್ರಿಯ ಧರ್ಮವಾಗಿ ಬೆಳೆದು ಬಂದಿದೆ. ಈ ಪ್ರದೇಶದಲ್ಲಿ ಅರಸುಗೈದ ಗಂಗ ಮತ್ತು ಹೊಯ್ಸಳ ಮನೆತನಗಳ ಕಾಲಾವಧಿಯಲ್ಲಿ ಈ ಧರ್ಮದ ಅಧಿಕ ಬಸದಿಗಳು ನಿರ್ಮಾಣವಾದವು. ಅಲ್ಲದೇ ಅದೇ ಕಾಲದಲ್ಲಿ ಧರ್ಮದ ಸಾಂಸ್ಕೃತಿಕ ಚಟುವಟಿಕೆಗಳು ಕೃಷ್ಣರಾಜಪೇಟೆ ಪ್ರದೇಶದಲ್ಲಿ ನಿರಂತರವಾಗಿ ಬೆಳೆದು ಬಂದಿರುವುದು ಶಾಸನಾದಿ, ಪುರಾತತ್ವ ಆಧಾರಗಳಿಂದ ಸ್ಪಷ್ಟವಾಗುತ್ತದೆ. ಇದರಲ್ಲಿರುವ ಬ್ರಹ್ಮಕಾಂತ ಸ್ತಂಭಗಳು ಪೀಠ, ಪಾದಕ, ದಂತ ಫಲಕ ಮತ್ತು ಬೋದಿಗೆಯಿಂದ ಕೂಡಿವೆ. ಭಿತ್ತಿಯಲ್ಲಿ ಹನ್ನೆರಡು ಅರ್ಧಗಂಭಗಳಿವೆ. ವಿತಾನದಲ್ಲಿ ಪದ್ಮ ಮಂಡಲದ ಅಲಂಕಾರವಿದೆ. ದ್ವಾರ ಬಂಧವು ಪಂಚ ಶಾಖೆಗಳಿಂದ ಕೂಡಿದ್ದು ಹೊಯ್ಸಳರ ಕಲಾ ವಾಸ್ತು ಶಿಲ್ಪ, ಶೈಲಿಯಲ್ಲಿ ಈ ಜಿನಾಲಯವು ನಿರ್ಮಾಣಗೊಂಡಿದೆ.

**ಪರಾಮರ್ಶನ ಗ್ರಂಥಗಳು**


- ನಾಗರಾಜರಾವ್ ಬಿ, ಎಸ್. *ಮಂಡ್ಯ ಜಿಲ್ಲೆಯಲ್ಲಿ ಜೈನ ಧರ್ಮ.* ಪು.295–97
- ರಾಜಾಮಣಿ ಎಂ.ಬಿ. *ಮಂಡ್ಯ ಜಿಲ್ಲೆಯಲ್ಲಿ ಶೈವ ಧರ್ಮ*
- ರಾಜೇಗೌಡ, ಹ.ಕ. *ಇತಿಹಾಸ ಶೋಧ.* ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ
- Nagaraju, S . *Buddist Architecture Of Western India.*
- Settar, S. (1992). *The Hoysala Temples. Vol. I & II.* Karnataka University